# ಮೂರು ಕಥೆಗಳು

## (ಛಾಂದೋಗ್ಯೋಪನಿಷತ್ತಿನ ಕಥೆಗಳು)

ಸ್ವಾಮಿ ವೀರೇಶಾನಂದ

### ಇಂದ್ರಿಯಗಳಲ್ಲಿ ಯಾರು ಜ್ಯೇಷ್ಠರು?

ಒಮ್ಮೆ ಇಂದ್ರಿಯಗಳ ಮಧ್ಯೆ ಒಂದು ಕಲಹ ಉಂಟಾಯಿತು. ಪ್ರತಿಯೊಂದು ಇಂದ್ರಿಯವೂ, 'ನಾನೇ ಹೆಚ್ಚಾಗಿರುವೆನು, ನಾನೇ ಹೆಚ್ಚಾಗಿರುವೆನು' ಎಂದು ವಾದಿಸಲು ಆರಂಭಿಸಿದವು. ಈ ಎಲ್ಲ ಇಂದ್ರಿಯಗಳೂ ಪ್ರಜಾಪತಿಯ ಬಳಿಗೆ ಹೋದವು. ''ಭಗವಂತನೇ, ನಮ್ಮೊಳಗೆ ಯಾವನು ಶ್ರೇಷ್ಠನು?'' ಎಂದು ಕೇಳಿದವು. ಅದಕ್ಕೆ ಪ್ರಜಾಪತಿಯು ಹೀಗೆ ಹೇಳಿದನು: ''ನಿಮ್ಮೊಳಗೆ ಯಾರು ಹೊರಕ್ಕೆ ಹೋದರೆ, ಶರೀರವು ಹೆಣವಾಗಿ ಬಿಡುವುದೋ, ಅಶುಚಿಯಾಗಿ ಕಾಣುವುದೋ, ಅವನೇ ನಿಮ್ಮೊಳಗೆ ಶ್ರೇಷ್ಠನು.'' ಪರೋಕ್ಷರೀತಿಯಿಂದ ಮುಖ್ಯಪ್ರಾಣನೇ ಇಂದ್ರಿಯಗಳಲ್ಲೆಲ್ಲ ಶ್ರೇಷ್ಠನಾದವನು ಎಂದು ಸೂಚಿಸಿದನು.

ಇದನ್ನು ಅರ್ಥಮಾಡಿಕೊಳ್ಳಲಾಗದ ಇಂದ್ರಿಯಗಳು, ತಾವೇ ಶ್ರೇಷ್ಠವಾದವು ಎಂದು ತಿಳಿದುಕೊಂಡವು. ತಾನು ಶರೀರದ ಹೊರಗೆ ಹೋದರೆ, ಶರೀರವು ಹೆಣವಾಗಿ ಬಿಡುತ್ತವೆ ಎಂದು ಪ್ರತಿಯೊಂದು ಇಂದ್ರಿಯವೂ ಭಾವಿಸಿಕೊಂಡಿತು. ಇವುಗಳಲ್ಲಿ ಮೊದಲನೆಯದಾಗಿ ವಾಕ್ ಅಥವಾ ಮಾತು ಶರೀರದ ಹೊರಗೆ ಹೊರಟುಹೋಯಿತು. ಒಂದು ವರ್ಷವಾದ ಮೇಲೆ ತಿರುಗಿ ಬಂದಿತು. ಇಷ್ಟಾದರೂ ಬೇರೆ ಎಲ್ಲ ಇಂದ್ರಿಯಗಳೂ ಕೆಲಸ ಮಾಡಿಕೊಂಡೇ ಇದ್ದವು. ಇದನ್ನು ಕಂಡು ವಾಕ್ಕು ಆಶ್ಚರ್ಯಗೊಂಡಿತು. ''ನಾನಿಲ್ಲದೆ ಬದುಕಿರುವುದಕ್ಕೆ ಹೇಗೆ ನೀವು ಶಕ್ತರಾದಿರಿ?'' ಎಂದು ಅದು ಉಳಿದ ಇಂದ್ರಿಯಗಳನ್ನು ಕೇಳಿತು. ಆ ಎಲ್ಲ ಇತರ ಇಂದ್ರಿಯಗಳು ವಾಕ್ಕಿಗೆ ಹೇಳಿದವು, ''ಅಯ್ಯಾ, ವಾಗ್ದೇವತೆಯೇ, ಕೆಲವರು ಬಾಲ್ಯದಿಂದಲೇ ಮೂಕರಾಗಿರುತ್ತಾರೆ. ಅವರೇನೂ ಮಾತನಾಡುವುದಿಲ್ಲ. ಹಾಗಿದ್ದರೂ ಅವರೆಲ್ಲ ಪ್ರಾಣದ ಮೂಲಕವಾಗಿ ಉಸಿರು ಬಿಡುತ್ತಿರುತ್ತಾರೆ. ಕಣ್ಣಿನ ಮೂಲಕ ನೋಡುತ್ತಿರುತ್ತಾರೆ. ಕಿವಿಯ ಮೂಲಕ ಕೇಳುತ್ತಿರುತ್ತಾರೆ. ಮನಸ್ಸಿನಿಂದ ಚಿಂತಿಸುತ್ತಿರುತ್ತಾರೆ. ಹೀಗೆ ಮಾತನಾಡುವುದಕ್ಕೆ ಬರದಿದ್ದರೂ ಅವರೆಲ್ಲ ಜೀವನವನ್ನು ನಡೆಸುತ್ತಿರುತ್ತಾರೆ. ಇದೇ ರೀತಿ ನಾವು ಕೂಡ ಜೀವಿಸಿದ್ದೇವೆ.''

ತದನಂತರ ಚಕ್ಷುರಿಂದ್ರಿಯ ಅಥವಾ ಕಣ್ಣಿನ ಇಂದ್ರಿಯವು ಶರೀರವನ್ನು ಬಿಟ್ಟು ಹೊರಟುಹೋಯಿತು. ಅದೂ ಕೂಡ ಒಂದು ವರ್ಷದವರೆಗೆ ಶರೀರವನ್ನು ಬಿಟ್ಟುಹೋಯಿತು. ತಾನು ದೇಹವನ್ನು ಬಿಟ್ಟುಹೋದರೆ, ಶರೀರವು ನಷ್ಟವಾಗುತ್ತದೆ ಎಂದು ಅದು ಅಂದುಕೊಂಡಿತ್ತು. ಒಂದು ವರ್ಷದ ನಂತರ ಅದು ಬಂದು ನೋಡಿದಾಗ ಅದಕ್ಕೆ ಆಶ್ಚರ್ಯ ಕಾದಿತ್ತು. ''ನಾವಿಲ್ಲದೆ ನೀವು ಹೇಗೆ ತಾನೇ ಬದುಕಿದ್ದಿರಿ?'' ಎಂದು ಅದು ಉಳಿದ ಇಂದ್ರಿಯಗಳನ್ನು ಕೇಳಿತು. ಅವರೆಲ್ಲರೂ ಶ್ರೋತ್ರೇಂದ್ರಿಯಕ್ಕೆ ಹೇಳಿದವು: ''ಕಣ್ಣಿಲ್ಲದಿರುವವರು ನೋಡಲು ಆಗುವುದಿಲ್ಲ. ಆದರೂ ಅಂಥವರು ಪ್ರಾಣದಿಂದಾಗಿ ಉಸಿರಾಡುತ್ತಾರೆ. ಕಿವಿಯಿಂದ ಕೇಳುತ್ತಾರೆ. ಮನಸ್ಸಿನಿಂದ ಚಿಂತನೆ ಮಾಡುತ್ತಾರೆ. ಅವರ ಹಾಗೆಯೇ ನಾವು ಕೂಡ ಜೀವಿಸಿದ್ದೇವೆ. ''

ಹಾಗೆಯೇ ಉಳಿದ ಇಂದ್ರಿಯಗಳು ಕೂಡ ಒಂದು ವರ್ಷದ ವರೆಗೆ ಮನುಷ್ಯನ ದೇಹವನ್ನು ಬಿಟ್ಟು ಹೋದವು. ಬಳಿಕ ಬಂದು ನೋಡಿದಾಗ, ಮನುಷ್ಯನು ಜೀವಿಸಿಯೇ ಇದ್ದನು. ಈ ರೀತಿಯಲ್ಲಿ ತಾವು ಇಲ್ಲದಿದ್ದರೂ ಮನುಷ್ಯನು ಜೀವಿಸುವನು; ಹೀಗಾಗಿ ತಾವು ಇಂದ್ರಿಯಗಳಲ್ಲೆಲ್ಲ ಶ್ರೇಷ್ಠವಾದುವಲ್ಲ ಎಂದು ತಿಳಿದುಕೊಂಡವು.

ಕಟ್ಟಕಡೆಯಲ್ಲಿ ಪ್ರಾಣವು ಶರೀರದಿಂದ ಎದ್ದು ಹೊರಡೋಣ ಎಂದು ಏಳಲು ಪ್ರಯತ್ನಿಸಿದನು. ಆಗ ಉಳಿದ ಇಂದ್ರಿಯಗಳೂ ತಮ್ಮ ತಮ್ಮ ಸ್ಥಾನಗಳಿಂದ ಬಲಾತ್ಕಾರವಾಗಿ ಎದ್ದುಕೊಂಡವು. ಉಪನಿಷತ್ತು ಒಂದು ಉದಾಹರಣೆಯನ್ನು ನೀಡುತ್ತದೆ. ಒಂದು ಒಳ್ಳೆಯ ಕುದುರೆಯ ಕಾಲುಗಳಿಗೆ ಕಟ್ಟಿದ ಗೂಟಗಳನ್ನು, ಪರೀಕ್ಷೆ ಮಾಡಲು ಸುತ್ತಿಗೆಯಿಂದ ಹೊಡೆಯಲು ಪ್ರಯತ್ನಿಸಿದಾಗ, ಆ ಗೂಟಗಳು ಹೇಗೆ ಚೆನ್ನಾಗಿ ಕಿತ್ತುಬರುತ್ತವೆಯೋ, ಅದೇ ರೀತಿ ಪ್ರಾಣವು ಎದ್ದುನಿಂತಲು ಹೊರಟುನಿಂತಾಗ, ಉಳಿದ ಇಂದ್ರಿಯಗಳೂ ತಮ್ಮ ತಮ್ಮ ಸ್ಥಾನಗಳಿಂದ ಕಿತ್ತುಕೊಂಡು ಬಂದವು.

ಹೀಗೆ ಪ್ರಾಣಗಳೆಲ್ಲ ಬಲಾತ್ಕಾರವಾಗಿ ಅಲುಗಾಡಿಸಲ್ಪಟ್ಟವು. ಅವೆಲ್ಲ ತಮ್ಮ ತಮ್ಮ ಸ್ಥಾನಗಳಲ್ಲಿ ದೃಢವಾಗಿ ಇರಲು ಸಾಧ್ಯವಾಗದೆ, ಮುಖ್ಯಪ್ರಾಣನ ಬಳಿಗೆ ಬಂದು ಕೈಮುಗಿದುಕೊಂಡು, ಕೇಳಿಕೊಂಡವು: ''ಎಲೈ ಭಗವಂತನೇ, ನೀನೇ ನಮ್ಮ ಒಡೆಯ. ನಮ್ಮ ನಾಯಕನಾಗಿ ನೀನು ಇಲ್ಲಿಯೇ ದಯವಿಟ್ಟು ಇದ್ದುಕೊಂಡಿರು. ಏಕೆಂದರೆ, ನೀನೇ ನಮ್ಮೆಲ್ಲ ಶ್ರೇಷ್ಠನಾಗಿರುವೆ. ದಯವಿಟ್ಟು ಈ ದೇಹದಿಂದ ಎದ್ದು ಹೊರಟುಹೋಗಬೇಡ.'' ಅನಂತರ, ಅರಸನಿಗೆ ಪ್ರಜೆಗಳು ಕಾಣಿಕೆಯನ್ನು ಒಪ್ಪಿಸುವಂತೆ, ಅವು ಹೀಗೆ ಹೇಳಿದವು. ವಾಕ್ಕು ಹೇಳಿತು, ''ಅಯ್ಯಾ ಮುಖ್ಯಪ್ರಾಣನೇ, ಮಾತನಾಡುವ ನನ್ನ ಗುಣವು ನನ್ನದಲ್ಲ. ಆ ಗುಣವು ನಿನ್ನದೇ..'' ಅದೇ ರೀತಿ, ಚಕ್ಷುರಿಂದ್ರಿಯವು ಹೇಳಿತು, ''ನೋಡುವ ನನ್ನ ಗುಣವೂ ನಿನ್ನದೇ'' ಎಂದು. ಹೀಗೆ ಎಲ್ಲ ಇಂದ್ರಿಯಗಳೂ, ತಮ್ಮ ಸತ್ವವೆಲ್ಲವೂ ಪ್ರಾಣನಲ್ಲಿಯೇ ಇದೆ ಎಂದು ಒಪ್ಪಿಕೊಂಡವು.

ಮುಖ್ಯಪ್ರಾಣನೇ ಉಳಿದೆಲ್ಲ ಇಂದ್ರಿಯಗಳ ರೂಪನಾಗಿದ್ದಾನೆ ಎಂದು ಉಪನಿಷತ್ತು ಹೇಳುತ್ತದೆ. ಈ ಇಂದ್ರಿಯಗಳನ್ನು ಜನರು ವಾಕ್ಕು ಎಂದು ಕರೆಯುವುದಿಲ್ಲ. ಅದೂ ಒಂದು ರೀತಿಯ ಪ್ರಾಣವೇ ಎಂದು ಹೇಳುತ್ತಾರೆ. ಹಾಗೆಯೇ ಜನರು ಶ್ರೋತ್ರ ಎಂದು ಕರೆಯುವುದಿಲ್ಲ. ಅದನ್ನೂ ಪ್ರಾಣ ಎಂದೇ ಕರೆಯುತ್ತಾರೆ. ಹೀಗೆಯೇ ಎಲ್ಲ ಇಂದ್ರಿಯಗಳೂ ಪ್ರಾಣವೇ ಆಗಿರುತ್ತವೆ. ಏಕೆಂದರೆ, ಈ ಎಲ್ಲ ಇಂದ್ರಿಯಗಳೂ ಪ್ರಾಣದ ವಿವಿಧ ಅಭಿವ್ಯಕ್ತಿಗಳೇ ಆಗಿವೆ. ಇದೇ ಮುಖ್ಯಪ್ರಾಣನ ಮಹಿಮೆಯಾಗಿದೆ.



## ಪಂಚಾಗ್ನಿವಿದ್ಯೆಯ ಕಥೆ

ಶ್ವೇತಕೇತವು ಅರುಣನ ಪುತ್ರನು. ಹೀಗಾಗಿ ಅವನು ಆರುಣೇಯ ಶ್ವೇತಕೇತುವು. ಅವನು ಪಾಂಚಾಲ ಜನಪದವನ್ನು ಆಳುತ್ತಿದ್ದ ಸಮಿತಿಯ ಒಂದು ಸಭೆಗೆ ಬಂದನು. ಅವನನ್ನು ಪ್ರವಾಹಣ ಜೈವಲಿ ಎಂಬ ರಾಜನು ಪ್ರಶ್ನಿಸಿದನು: ''ಕುಮಾರನೇ, ತಂದೆಯು ನಿನಗೆ ವಿದ್ಯಾಭ್ಯಾಸ ಮಾಡಿಸಿದ್ದಾನೇನು?'' ಇದಕ್ಕೆ ಶ್ವೇತಕೇತವು, ''ಹೌದು, ಭಗವಂತನೇ'' ಎಂದು ವಿನಯದಿಂದ ಉತ್ತರ ಕೊಟ್ಟನು. ''ಹಾಗಾದರೆ ನನ್ನ ಪ್ರಶ್ನೆಗಳಿಗೆ ಉತ್ತರಿಸು'' ಎಂದು ಪ್ರವಾಹಣ ಜೈವಲಿಯು ಆದೇಶವಿತ್ತನು. ''ಹಾಗೆಯೇ ಆಗಲಿ'' ಎಂದು ಶ್ವೇತಕೇತುವು ಒಪ್ಪಿಕೊಂಡನು. ಅವರಿಬ್ಬರ ನಡುವಿನ ಸಂಭಾಷಣೆಯು ಹೀಗಿತ್ತು:

**ಪ್ರವಾಹಣ ಜೈವಲಿ:** ಪ್ರಜೆಗಳು ಸತ್ತಮೇಲೆ ಎಲ್ಲಿಗೆ ಹೋಗುತ್ತಾರೆ ಎನ್ನುವುದು ನಿನಗೆ ಗೊತ್ತೇನು?

**ಶ್ವೇತಕೇತು:** ಇಲ್ಲ, ಭಗವಂತನೇ.

**ಪ್ರವಾಹಣ ಜೈವಲಿ:** ಅವರೆಲ್ಲ ಮತ್ತೆ ಹೇಗೆ ಹಿಂತಿರುಗುತ್ತಾರೆ ಎನ್ನುವುದು ನಿನಗೆ ಗೊತ್ತೇನು?

**ಶ್ವೇತಕೇತು:** ಇಲ್ಲ, ಭಗವಂತನೇ.

**ಪ್ರವಾಹಣ ಜೈವಲಿ:** ಈ ಲೋಕದಿಂದ ತೆರಳುವ ಮಾರ್ಗಗಳಾದ ಪಿತೃಯಾನ ಮತ್ತು ದೇವಮಾರ್ಗಗಳು ಪರಸ್ಪರ ಬಿಟ್ಟು ಅಗಲುವ ಸ್ಥಾನವನ್ನು ನೀನು ಬಲ್ಲೆಯಾ?

**ಶ್ವೇತಕೇತು:** ಇಲ್ಲ, ಭಗವಂತನೇ.

**ಪ್ರವಾಹಣ ಜೈವಲಿ:** ಈ ಲೋಕವು ಅಂದರೆ, ಯಾವುದನ್ನು ಸೇರಿದವರು ಖಂಡಿತವಾಗಿಯೂ ಹಿಂತಿರುಗುತ್ತಾರೋ — ಆ ಪಿತೃಲೋಕವು ಬಹುಜನರು ಹೋಗಿ ಸೇರಿದರೂ ಕೂಡ ಯಾವ ಕಾರಣದಿಂದಲೂ ತುಂಬಿಕೊಳ್ಳುವುದಿಲ್ಲ. ಇದು ನಿನಗೆ ಗೊತ್ತೇನು?

**ಶ್ವೇತಕೇತು:** ಇಲ್ಲ, ಭಗವಂತನೇ.

**ಪ್ರವಾಹಣ ಜೈವಲಿ:** ಹೋಮ ಮಾಡುವ ಆಹುತಿಗಳಲ್ಲಿ ಐದನೆಯ ಆಹುತಿಗೆ ಪುರುಷ ಎಂಬ ಹೆಸರಾಗುವುದೂ ಹೇಗೆ?

**ಶ್ವೇತಕೇತು:** ಇಲ್ಲವೇ ಇಲ್ಲ, ಭಗವಂತನೇ.

**ಪ್ರವಾಹಣ ಜೈವಲಿ:** ಹಾಗಾದರೆ ನೀನು ಶಿಕ್ಷಿತನಾಗಿದ್ದೀಯೆಂದು ಹೇಗೆ ತಾನೇ ಹೇಳಿಕೊಳ್ಳುವೆ? ಈ ಎಲ್ಲ ತಿಳಿದುಕೊಳ್ಳಬೇಕಾದ ವಿಷಯಗಳನ್ನು ನೀನು ತಿಳಿದುಕೊಳ್ಳದೇ ಇರುವೆ. ಹೀಗೆ ಅರಿಯದವನು ಹೇಗೆ ತಾನೇ ತಾನು ವಿದ್ಯಾವಂತನೆಂದು ಹೇಳಿಕೊಳ್ಳುತ್ತಾನೆ?

ಪ್ರವಾಹಣ ಜೈವಲಿಯ ಹಂಗಿಸುವ ಈ ಮಾತುಗಳನ್ನು ಕೇಳಿ ಶ್ವೇತಕೇತುವು ಮನಸ್ಸಿನಲ್ಲಿ ವ್ಯಥೆಗೊಂಡನು. ತನ್ನ ತಂದೆಯಾದ ಅರುಣನ ಹತ್ತಿರ ಬಂದನು. ಅವನನ್ನು ಆಕ್ಷೇಪಿಸುವ ಧ್ವನಿಯಲ್ಲಿ ಹೇಳಿದನು: ''ನನಗೆ ಉಪದೇಶವನ್ನೇ ಮಾಡದೆಯೇ, ಉಪದೇಶ ಮಾಡಿರುವೆ ಎಂದು, ಭಗವಂತನಾದ ತಂದೆಯೇ, ನೀನು ಹೇಳಿಕೊಳ್ಳುತ್ತೀಯಲ್ಲ? ಆ ಕೆಟ್ಟ ರಾಜನಾದ ಪ್ರವಾಹಣ ಜೈವಲಿಯು ನನಗೆ ಐದು ಪ್ರಶ್ನೆಗಳನ್ನು ಕೇಳಿದನು. ಅವುಗಳಲ್ಲಿ ಒಂದು ಪ್ರಶ್ನೆಗೂ ನನಗೆ ಉತ್ತರಿಸಲಾಗಲಿಲ್ಲ. ಇದು ನನ್ನ ತಪ್ಪೇ, ಅಥವಾ ಆಚಾರ್ಯನಾದ ತಂದೆಯ ತಪ್ಪೇ?''

ಇದಕ್ಕೆ ತಂದೆಯಾದ ಅರುಣನು ಹೀಗೆಂದನು: ''ಮಗೂ, ನೀನು ಯಾವ ಐದು ಪ್ರಶ್ನೆಗಳ ಬಗ್ಗೆ ಹೇಳಿದೆಯೋ, ನಾನು ಅವುಗಳಲ್ಲಿ ಒಂದಕ್ಕೂ ಉತ್ತರವನ್ನು ಅರಿಯೆನು. ಇವುಗಳಲ್ಲಿ ಒಂದನ್ನಾದರೂ ನಾನು ಅರಿತಿದ್ದರೆ, ನಿನಗೆ ನಾನು ಹೇಗೆ ತಾನೇ ಹೇಳದೆ ಇರುತ್ತಿದ್ದೆನು?''

ಅನಂತರ ಗೌತಮ ಗೋತ್ರದವನಾದ ಅರುಣನು ರಾಜನಾದ ಪ್ರವಾಹಣ ಜೈವಲಿಯ ರಾಜಾಸ್ಥಾನಕ್ಕೆ ಬಂದನು. ತನ್ನ ಅರಮನೆಗೆ ಬಂದ ಅರುಣನಿಗೆ ಜೈವಲಿಯು ಅತ್ಯಂತ ಗೌರವಾದರಗಳನ್ನು ತೋರಿಸಿದನು. ಅಂದಿನ ರಾತ್ರಿ ಆರುಣಿಯು ಅಲ್ಲಿಯೇ ಕಳೆದನು. ಬೆಳಗಿನ ಹೊತ್ತು, ರಾಜನ ಸಭೆಗೆ ಬಂದನು. ಅವನನ್ನು ಕುರಿತು ರಾಜನು ಹೀಗೆ ಹೇಳಿದನು: ''ಹೇ ಭಗವಂತನಾದ ಗೌತಮನೇ, ಸಾಧಾರಣ ಮನುಷ್ಯನು ಬೇಡುವ ಗ್ರಾಮ ಮುಂತಾದ ಸಂಪತ್ತು — ಏನು ಬೇಕಾದರೂ ಕೇಳಿಕೋ.'' ಅದಕ್ಕೆ ಅರುಣನು ಹೀಗೆ ಹೇಳಿದನು: ''ಅಯ್ಯಾ, ರಾಜನೇ, ಸಾಧಾರಣ ಮನುಷ್ಯನು ಬೇಡುವ ಗ್ರಾಮ ಮೊದಲಾದ ಸಂಪತ್ತುಗಳು ನಿನ್ನಲ್ಲಿಯೇ ಇರಲಿ.

ನೀನು ನನ್ನ ಮಗನಾದ ಶ್ವೇತಕೇತುವಿಗೆ ಯಾವುದರ ಬಗ್ಗೆ ಪ್ರಶ್ನೆಗಳನ್ನು ಕೇಳಿದೆಯೋ, ಆ ವಿಷಯವನ್ನು ಮಾತ್ರ ಹೇಳಿ ಕೊಡು.''

ಈ ಪ್ರಾರ್ಥನೆಯಿಂದ ಪ್ರವಾಹಣ ಜೈವಲಿಗೆ ಧರ್ಮ ಸಂಕಟವಾಯಿತು. ಅದಕ್ಕೆ ಒಂದು ಕಾರಣವಿತ್ತು. ರಾಜನು ಕ್ಷತ್ರಿಯನು. ಅರುಣನು ಬ್ರಾಹ್ಮಣನು. ಈ ವಿದ್ಯೆಯನ್ನು ಇದುವರೆಗೆ ಯಾವ ಬ್ರಾಹ್ಮಣನೂ ಕಲಿತಿರಲಿಲ್ಲ. ಈಗ ಒಬ್ಬ ಬ್ರಾಹ್ಮಣನು ಬಂದು ಕಲಿಯಲು ಇಚ್ಛಿಸುತ್ತಿದ್ದಾನೆ. ನಿರಾಕರಿಸುವುದು ಸರಿಯಲ್ಲ. ಹಾಗೆಂದೇ ಪ್ರವಾಹಣ ಜೈವಲಿಯು ಹೀಗೆ ಆದೇಶವಿತ್ತನು: ''ಹಾಗಾದರೆ, ನೀನು ಬಹುಕಾಲ ಇಲ್ಲಿ ಬ್ರಹ್ಮಚರ್ಯ ಪಾಲನೆ ಮಾಡಿಕೊಂಡು ವಾಸಮಾಡಬೇಕಾಗುತ್ತದೆ. ಅನಂತರ ನೀನು ನನಗೆ ಕೇಳಿದ ವಿಚಾರದ ಬಗ್ಗೆ ಹೇಳುತ್ತೇನೆ, ಕೇಳು. ಈ ವಿದ್ಯೆ ನಿನಗಿಂತ ಹಿಂದೆ ಬ್ರಾಹ್ಮಣರನ್ನು ಸೇರಿರಲಿಲ್ಲ. ಇಲ್ಲಿಯವರೆಗೆ ಎಲ್ಲ ಲೋಕಗಳಲ್ಲಿಯೂ ಕ್ಷತ್ರಿಯರಿಗೇ ಈ ವಿದ್ಯೆಯು ಸೀಮಿತವಾಗಿತ್ತು.'' ಹೀಗೆ ಹೇಳಿ, ಪ್ರವಾಹಣ ಜೈವಲಿಯು ಗೌತಮನಾದ ಅರುಣನಿಗೆ ಆ ವಿದ್ಯೆಯನ್ನು ಹೇಳಿಕೊಟ್ಟನು.

ಈ ವಿದ್ಯೆಯು **ಪಂಚಾಗ್ನಿವಿದ್ಯೆ** ಎಂದು ಪ್ರಸಿದ್ಧವಾಗಿದೆ. ಐದು ಅಗ್ನಿಗಳ ಬಗೆಗಿನ ವಿದ್ಯೆಯೇ ಪಂಚಾಗ್ನಿವಿದ್ಯೆ. ದ್ಯುಲೋಕಾಗ್ನಿಯೇ ಮೊದಲನೆಯ ಅಗ್ನಿ. ಇದನ್ನು ಪ್ರವಾಹಣ ಜೈವಲಿಯು ಉಪದೇಶಿಸಿದ ರೀತಿ ಇದು: ''ಗೌತಮನೇ, ಈ ಲೋಕವೇ ಅಗ್ನಿಯು. ಅದಕ್ಕೆ ಆದಿತ್ಯನೇ ಸಮಿತ್ತು. ರಶ್ಮಿಗಳೇ ಅಗ್ನಿ. ಹಗಲು ಉರಿ. ಚಂದ್ರನೇ ಕೆಂಡ, ನಕ್ಷತ್ರಗಳೇ ಕಿಡಿಗಳು. ಈ ದ್ಯುಲೋಕಾಗ್ನಿಯಲ್ಲಿ ದೇವತೆಗಳು ಶ್ರದ್ಧೆಯನ್ನು ಹೋಮಮಾಡುತ್ತಾರೆ. ಈ ಆಹುತಿಯಿಂದ ಹುಟ್ಟುವುದೇ ಸೋಮರಾಜನು.'' ಎರಡನೆಯ ಅಗ್ನಿಯೆಂದರೆ ಪರ್ಜನ್ಯ ಅಗ್ನಿ ಅಥವಾ ಮೋಡದ ಅಗ್ನಿ. ''ಗೌತಮನೇ, ಪರ್ಜನ್ಯವೇ ಅಗ್ನಿ. ಅದಕ್ಕೆ ವಾಯುವೇ ಸಮಿತ್ತು. ಮೋಡವು ಹೊಗೆ. ವಿದ್ಯುತ್ತು ಉರಿ. ಸಿಡಿಲೇ ಕೆಂಡ, ಮೋಡಗಳ ಗುಡುಗಿನ ಶಬ್ದವೇ ಕಿಡಿಗಳು. ಈ ಪರ್ಜನ್ಯಾಗ್ನಿಯಲ್ಲಿ ದೇವತೆಗಳು ಸೋಮರಾಜನನ್ನು ಹೋಮಮಾಡುತ್ತಾರೆ. ಈ ಆಹುತಿಯಿಂದ ಹುಟ್ಟುವುದೇ ಮಳೆ.'' ಮೂರನೆಯ ಅಗ್ನಿಯೆಂದರೆ ಪೃಥಿವೀ ಅಗ್ನಿ. ರಾಜನು ಹೇಳುತ್ತಾನೆ, ''ಹೇ ಗೌತಮನೇ, ಪೃಥಿವಿಯೇ ಅಗ್ನಿ. ಅದಕ್ಕೆ ಸಂವತ್ಸರವೇ ಸಮಿತ್ತು. ಆಕಾಶವೇ ಅಗ್ನಿ. ರಾತ್ರಿಯೇ ಉರಿ. ದಿಕ್ಕುಗಳೇ ಕೆಂಡ. ಅವಾಂತರ ದಿಕ್ಕುಗಳೇ (ಕೋನದ ದಿಕ್ಕುಗಳು) ಕಿಡಿಗಳು. ಈ ಪೃಥಿವ್ಯಗ್ನಿಯಲ್ಲಿ ದೇವತೆಗಳು ಮಳೆಯನ್ನು ಹೋಮಮಾಡುತ್ತಾರೆ. ಆ ಆಹುತಿಯಿಂದ ಹುಟ್ಟಿದ್ದು ಅನ್ನ ಅಥವಾ ಆಹಾರ.'' ಇನ್ನು ಮುಂದಿನದು ಪುರುಷಾಗ್ನಿ. ''ಇಲ್ಲಿ ಪುರುಷನೇ ಅಗ್ನಿಯು. ಅವನ ಮಾತೇ ಸಮಿತ್ತು. ಪ್ರಾಣವೇ ಹೊಗೆ. ನಾಲಗೆಯೇ ಉರಿ. ಕಣ್ಣುಗಳೇ ಕೆಂಡ. ಕಿವಿಯೇ ಕಿಡಿಗಳು. ಈ ಪುರುಷಾಗ್ನಿಯಲ್ಲಿ ದೇವತೆಗಳು ಅನ್ನವನ್ನು ಹೋಮಮಾಡುತ್ತಾರೆ. ಈ ಆಹುತಿಯಿಂದ ರೇತಸ್ಸು ಉಂಟಾಗುತ್ತದೆ. ಮುಂದಿನದು ಯೋಷಾಗ್ನಿ. ಅಂದರೆ ಸ್ತ್ರೀಯೇ ಇಲ್ಲಿ ಅಗ್ನಿ. ಪುರುಷ ಮತ್ತು ಸ್ತ್ರೀಯರ ಒಡನಾಟದಿಂದ ಪ್ರಜೆಗಳ ಉತ್ಪತ್ತಿಯಾಗುತ್ತದೆ. ಮಗು ಒಂಭತ್ತು ತಿಂಗಳೋ, ಹತ್ತು ತಿಂಗಳೋ ಗರ್ಭದಲ್ಲಿ ಇರುತ್ತದೆ. ಆಮೇಲೆ ಹುಟ್ಟುತ್ತದೆ. ಹುಟ್ಟಿದವನು ತನ್ನ ಆಯುಸ್ಸು ಇರುವವರೆಗೂ ಬದುಕಿರುತ್ತಾನೆ. ಮತ್ತೆ ಮತ್ತೆ ನೀರಿನ ರಾಟೆಯಂತೆ ಅಥವಾ ಕುಂಬಾರನ ತಿಗುರಿಯಂತೆ ಸುತ್ತಿ ಸುತ್ತಿ ಬರುತ್ತಾನೆ. ಅಂದರೆ ಹುಟ್ಟುತ್ತಾನೆ, ಸಾಯುತ್ತಾನೆ. ಮತ್ತೆ ಹುಟ್ಟಿ ಬರುತ್ತಾನೆ, ಸಾಯುತ್ತಾನೆ. ಅವನು ಒಂದು ರೀತಿಯ ಅಗ್ನಿಯಿಂದ ಹುಟ್ಟುತ್ತಾನೆ. ಸತ್ತಾಗ ಅವನಿಗೆ ಕಾರಣವಾದ ಅಗ್ನಿಗೇ ಅವನನ್ನು ಕರೆದುಕೊಂಡು ಹೋಗಿ ಸುಡುತ್ತಾರೆ.''

''ಅರಣ್ಯದಲ್ಲಿ ಶ್ರದ್ಧೆ ಮತ್ತು ತಪಸ್ಸುಗಳಿಂದ ಉಪಾಸನೆ ಮಾಡುತ್ತ, ಈ ವಿದ್ಯೆಯನ್ನು ತಿಳಿದವನು ದೇವಯಾನವೆಂಬ ಉತ್ತರಾದಿ ಮಾರ್ಗವನ್ನು ಹಿಡಿಯುತ್ತಾನೆ. ಮೊದಲು ಅವನು ಸಂವತ್ಸರವೆಂಬ ದೇವತೆಯನ್ನು ತಲುಪುತ್ತಾನೆ. ಸಂವತ್ಸರದಿಂದ ಆದಿತ್ಯನನ್ನು, ಆದಿತ್ಯನಿಂದ ಚಂದ್ರನನ್ನು, ಚಂದ್ರದಿಂದ ವಿದ್ಯುತ್ತನ್ನು, ವಿದ್ಯುತ್ತಿನಿಂದ ಹಿರಣ್ಯಗರ್ಭನನ್ನು ಸೇರುತ್ತಾನೆ. ಆದರೆ ಇದು ಅಂತಿಮ ಗತಿಯಲ್ಲ. ಇದು ಸತ್ಯಲೋಕವನ್ನು ಸೇರುವ ಮಾರ್ಗ ಮಾತ್ರ. ಇದನ್ನೂ ಮೀರಿದ್ದು ಆತ್ಮಜ್ಞಾನ ಅಥವಾ ಬ್ರಹ್ಮಜ್ಞಾನ. ಅದರಿಂದ ಮಾತ್ರವೇ ಆತ್ಯಂತಿಕ ಮುಕ್ತಿಯು ಸಾಧ್ಯವಾಗುತ್ತದೆ.

''ಸಂಸಾರದಲ್ಲಿ ಅತ್ಯಂತ ಉನ್ನತವಾಗಿ ಹೋಗಿ ಸೇರುವ ಗತಿಯೆಂದರೆ ಇದೇ ಆಗಿದೆ. ಈ ಸಂಸಾರಗತಿಯು ಬಹಳ ದುಃಖಕರವಾದ್ದು ಮತ್ತು ಅತ್ಯಂತ ಕಷ್ಟವಾದದ್ದು. ಹುಟ್ಟುಸಾವುಗಳು ನಿರಂತರವಾಗಿ ಉಂಟಾಗುತ್ತವೆ; ಈ ಸಂಸಾರವು ಅಪಾರ ವೇದನೆಯನ್ನು ತಂದುಕೊಡುತ್ತದೆ. ಇಂಥ ಸಂಸಾರಗತಿಯಲ್ಲಿ ನಮಗೆ ಜುಗುಪ್ಸೆ ಬರಬೇಕು. ಘೋರವಾದ ಸಂಸಾರ ಮಹಾಸಾಗರದಲ್ಲಿ ನಾವು ಮುಳುಗದೆ ಇರೋಣ ಎಂದು ಸಂಸಾರದ ಬಗ್ಗೆ ನಮಗೆ ಅಸಹ್ಯವವೆನಿಸಬೇಕು.'' ಇದೇ ಪಂಚಾಗ್ನಿವಿದ್ಯೆಯು ನಮಗೆ ಬೋಧಿಸುವ ಪಾಠ.

## ವೈಶ್ವಾನರ ವಿದ್ಯೆಯ ಕಥೆ

ಕೆಲವರು ಮಹಾಗೃಹಸ್ಥರು, ಮಹಾವೈದಿಕರು ಒಟ್ಟುಗೂಡಿದರು. ಅವರ ಹೆಸರುಗಳೆಂದರೆ, ಪ್ರಾಚೀನಶಾಲ, ಸತ್ಯಯಜ್ಞ, ಇಂದ್ರದ್ಯುಮ್ನ, ಶರ್ಕರಾಕ್ಷ್ಯ ಮತ್ತು ಬುಡಿಲ. ಇವರೆಲ್ಲರೂ ಯಾವುದೋ ಒಂದು ಕಡೆ ಒಟ್ಟುಗೂಡಿದರು. ಅಲ್ಲಿ ಅವರು ಒಂದು ಪ್ರಮುಖ ವಿಷಯದ ಬಗ್ಗೆ ವಿಚಾರಮಾಡಿದರು. 'ನಮ್ಮಗಳ ಅಂತರಾತ್ಮನಾದ ವೈಶ್ವಾನರ ಆತ್ಮನೆಂಬುವವನು ಯಾರು? ಬ್ರಹ್ಮ ಎನ್ನುವವನು ಯಾರು?' ಎಂಬುದೇ ಆ ವಿಚಾರ. ಅವರೆಲ್ಲರೂ ಈ ವಿಷಯದ ಬಗ್ಗೆ ಹೀಗೆ ಗೊತ್ತುಪಡಿಸಿಕೊಂಡರು: ''ಮಹನೀಯರೇ, ಉದ್ದಾಲಕ ಆರುಣಿಯೆಂಬ ಮಹಾನ್ ಬ್ರಾಹ್ಮಣನು ವೈಶ್ವಾನರ ಆತ್ಮನನ್ನು ಚೆನ್ನಾಗಿ ತಿಳಿದುಕೊಂಡಿದ್ದಾನೆ. ಇದನ್ನು ಅವನ ಬಳಿಗೆ ಹೋಗಿ ತಿಳಿದುಕೊಳ್ಳೋಣ.''

ಅವರೆಲ್ಲರೂ ಉದ್ದಾಲಕ ಆರುಣಿಯ ಹತ್ತಿರ ಹೋದರು. ಅವರನ್ನು ನೋಡಿ ಉದ್ದಾಲಕನು ಮನಸ್ಸಿನಲ್ಲಿಯೇ ವ್ಯಥೆಗೊಂಡನು. ಅವನು ಹೀಗೆ ಯೋಚಿಸಿದನು: ''ಮಹಾಗೃಹಸ್ಥರೂ, ಮಹಾಶ್ರೋತ್ರಿಯರೂ ಆದ ಈ ಐದು ಮಹಾತ್ಮರು ವೈಶ್ವಾನರ ಆತ್ಮನ ಬಗ್ಗೆ ಕೇಳಲು ನನ್ನ ಬಳಿಗೆ ಬಂದಿದ್ದಾರೆ. ಅವರು ಕೇಳುತ್ತಿರುವ ಈ ವಿಷಯವು ನನಗೆ ಗೊತ್ತಿಲ್ಲ. ಅದನ್ನು ಹೇಳಲು ನಾನು ಶಕ್ತನಲ್ಲ. ಆದ್ದರಿಂದ, ಇವರೆಲ್ಲರನ್ನೂ, ಈ ವಿಷಯದ ಬಗ್ಗೆ ಪರಿಣತರಾದ ಇನ್ನೊಬ್ಬ ಉಪದೇಶಕನ ಬಳಿಗೆ ನಾನು ಕರೆದುಕೊಂಡು ಹೋಗುತ್ತೇನೆ.''

ಹೀಗೆ ನಿಶ್ಚಯಿಸಿಕೊಂಡು ಉದ್ದಾಲಕನು ಅವರಿಗೆ ಹೀಗೆ ಹೇಳಿದನು: ''ಭಗವಂತರೇ, ನಾನು ವೈಶ್ವಾನರ ಆತ್ಮವನ್ನು ಅರಿತವನಲ್ಲ. ಆದರೆ ಕೇಕಯನ ಮಗನಾದ ಅಶ್ವಪತಿಯೆಂಬ ರಾಜನು ಇದ್ದಾನೆ. ಅವನು ವೈಶ್ವಾನರವನ್ನು ಬಲ್ಲನು.'' ಹೀಗೆ ಹೇಳಿ, ಉದ್ದಾಲಕನು ಅವರೆಲ್ಲರನ್ನೂ ಕರೆದುಕೊಂಡು, ಅಶ್ವಪತಿಯ ಬಳಿಗೆ ಹೋದನು.

ಅಶ್ವಪತಿಯು ಅವರೆಲ್ಲರನ್ನೂ ಬಹಳ ಆದರದಿಂದ ಬರಮಾಡಿಕೊಂಡನು. ಅವರೆಲ್ಲರಿಗೂ ಪ್ರತ್ಯೇಕ ಪ್ರತ್ಯೇಕವಾಗಿ ಸತ್ಕಾರವನ್ನು ತನ್ನ ಪುರೋಹಿತರಿಂದಲೂ, ತನ್ನ ಸೇವಕರಿಂದಲೂ ಮಾಡಿಸಿದನು. ಮಾರನೆಯ ದಿನ, ಆ ರಾಜನು ಬೆಳಗ್ಗೆ ಏಳುವ ಸಮಯದಲ್ಲಿಯೇ ಅವರ ಬಳಿಗೆ ಬಂದನು. ಒಂದಿಷ್ಟು ಹಣವನ್ನು ಅವರಿಗೆ ಕೊಡಲು ಇಚ್ಛಿಸಿದನು. ಅವರು ಧನವನ್ನು ತೆಗೆದುಕೊಳ್ಳಲು ನಿರಾಕರಿಸಿದರು. 'ಇವರು ನನ್ನಲ್ಲಿ ದೋಷವನ್ನು ಕಂಡಿರಬಹುದು. ಹೀಗಾಗಿ ನನ್ನಿಂದ ಧನವನ್ನು ತೆಗೆದುಕೊಳ್ಳುತ್ತಿಲ್ಲ' — ಹೀಗೆ ಅಶ್ವಪತಿಯು ಯೋಚಿಸಿಕೊಂಡನು. ತಾನು ಉತ್ತಮನಾದ ರಾಜನಾಗಿದ್ದೇನೆ, ನೈತಿಕ ಪ್ರಜ್ಞೆಯುಳ್ಳವನಾಗಿದ್ದೇನೆ ಎಂದು ಅವರ ಮನಸ್ಸಿಗೆ ಬಿಂಬಿಸಲು ಹೀಗೆ ಹೇಳಿದನು: ''ನನ್ನ ದೇಶದಲ್ಲಿ ಕಳ್ಳತನ ಮಾಡುವವರು ಯಾರೂ ಇಲ್ಲ, ಜಿಪುಣನಾದವನೂ ಇಲ್ಲ, ಸಂಪತ್ತು ಇದ್ದೂ ದಾನ ಮಾಡದಿರುವವನು ಕೂಡ ನನ್ನ ರಾಜ್ಯದಲ್ಲಿ ಇಲ್ಲ. ಉತ್ತಮ ಬ್ರಾಹ್ಮಣನಾಗಿದ್ದುಕೊಂಡು ಮದ್ಯಪಾನ ಮಾಡುವವನು, ಅಗ್ನಿಯನ್ನು ಉಪಾಸನೆ ಮಾಡದೆಯೇ ನೂರಾರು ಗೋವುಗಳನ್ನು ಇಟ್ಟುಕೊಂಡಿರುವವನು ಕೂಡ ಯಾವನೂ ಇಲ್ಲ, ತನ್ನ ಅಧಿಕಾರಕ್ಕೆ ತಕ್ಕಂತೆ ಬುದ್ಧಿವಂತನಾಗದೆ ಮೂಢನಾದವನು ಕೂಡ ನನ್ನ ರಾಜ್ಯದಲ್ಲಿ ಯಾರೂ ಇಲ್ಲ. ಹಾಗೆಯೇ ಸ್ವೇಚ್ಛಾಚಾರಿಯಾದವನು ಕೂಡ ಯಾರೂ ಇಲ್ಲ. ಇನ್ನು ದುಷ್ಟ ಕೃತ್ಯಗಳನ್ನು ಮಾಡುವ ಸ್ತ್ರೀಯು ಹೇಗೆ ತಾನೇ ಇರಲು ಸಾಧ್ಯ? ಖಂಡಿತ ಇಲ್ಲ..''

ಇಷ್ಟು ಹೇಳಿದರೂ ಬಂದಿದ್ದ ಮಹನೀಯರು ಅಶ್ವಪತಿಯಿಂದ ಹಣವನ್ನು ಸ್ವೀಕರಿಸಿಕೊಳ್ಳಲು ಒಪ್ಪಲಿಲ್ಲ. ''ಓಹೋ, ನಾನು ಕೊಡುತ್ತಿರುವ ಹಣವು ಕಡಮೆಯಾಗಿರಬೇಕು. ಆದ್ದರಿಂದಲೇ ಅವರು ಬೇಡವೆನ್ನುತ್ತಿದ್ದಾರೆ'' — ಹೀಗೆಂದು ಭಾವಿಸಿದ ಅಶ್ವಪತಿಯು ಅವರಿಗೆ ಹೇಳಿದನು: ''ಎಲೈ ಭಗವಂತರೇ, ಕೆಲವು ದಿವಸಗಳಲ್ಲಿಯೇ ನಾನು ಒಂದು ದೊಡ್ಡ ಯಾಗವನ್ನು ಮಾಡುವವನಿದ್ದೇನೆ. ಅದಕ್ಕಾಗಿ ಶಾಸ್ತ್ರದಲ್ಲಿ ಒಬ್ಬೊಬ್ಬರಿಗೆ ಗೊತ್ತಾಗಿ ಎಷ್ಟು ಹಣವನ್ನು ಕೊಡಬೇಕೆಂದು ಹೇಳಿರುವುದೋ, ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಅಷ್ಟಷ್ಟು ಹಣವನ್ನು ನಾನು ಕೊಡುತ್ತೇನೆ. ಮಹಾನುಭಾವರಾದ ತಾವು ಇನ್ನೂ ಸ್ವಲ್ಪ ದಿನಗಳ ಕಾಲ ಇಲ್ಲಿಯೇ ಇರಬೇಕು. ನಾನು ನಡೆಸುವ ಯಾಗವನ್ನು ನೋಡಿಕೊಂಡೇ ಹೋಗಬೇಕು.''

ಆಗ ಅಶ್ವಪತಿಯ ಮನೆಗೆ ಬಂದಿದ್ದ ಆ ಆರು ಮಹಾನುಭಾವರು ಅಶ್ವಪತಿಗೆ ಹೀಗೆಂದರು: ''ಯಾವ ಪ್ರಯೋಜನಕ್ಕಾಗಿ ಒಬ್ಬ ಮನುಷ್ಯನು ಇನ್ನೊಬ್ಬ ವ್ಯಕ್ತಿಯ ಮನೆಗೆ ಬರುತ್ತಾನೆಯೋ, ಅದನ್ನೇ ಅವನು ಕೇಳಬೇಕು. 'ನಾನು ಬಂದಿರುವುದು ಇದೇ ಕಾರಣಕ್ಕಾಗಿ' ಎಂದು ಸ್ಪಷ್ಟವಾಗಿ ಒಪ್ಪಿಸಬೇಕು. ಇದೇ ಸತ್ಪುರುಷರ ಲಕ್ಷಣ. ನಾವು ಧನವನ್ನು ಬಯಸಿ ನಿಮ್ಮಲ್ಲಿಗೆ ಬಂದಿಲ್ಲ. ನಾವು ಬಂದಿರುವುದು ವೈಶ್ವಾನರ ವಿದ್ಯೆಯನ್ನು ಕಲಿಯಲು. ನೀನು ವೈಶ್ವಾನರ ಆತ್ಮವನ್ನು ಚೆನ್ನಾಗಿ ಬಲ್ಲೆ. ಆದ್ದರಿಂದ ನಮಗೆ ಅದನ್ನೇ ಹೇಳಿಕೊಡು.''

ರಾಜ ಅಶ್ವಪತಿಯು ಅವರಿಗೆ ಹೇಳಿದನು, ''ನಿಮಗೆ ನನ್ನ ಉತ್ತರವನ್ನು ಈಗ ಹೇಳುವುದಿಲ್ಲ. ನಾಳೆ ಬೆಳಿಗ್ಗೆ ಹೇಳುವೆನು.'' ರಾಜನ ಅಭಿಪ್ರಾಯವನ್ನು ತಿಳಿದುಕೊಂಡು, ಶಿಷ್ಯರೆಲ್ಲರೂ ಸಮಿತ್ತಿನ ಕಟ್ಟನ್ನು ಕೈಯಲ್ಲಿಟ್ಟುಕೊಂಡು ರಾಜನ ಬಳಿಗೆ ಬಂದರು. ತಾವು ಮಹಾಗೃಹಸ್ಥರು, ಮಹಾಶ್ರೋತ್ರಿಯರು ಎಂಬ ಅಭಿಮಾನ ಅವರಲ್ಲಿ ಎಳ್ಳಷ್ಟೂ ಇರಲಿಲ್ಲ. ಬ್ರಾಹ್ಮಣರಾದ ಅವರು ವೈಶ್ವಾನರ ವಿದ್ಯೆಯನ್ನು ಕಲಿಯಲು ಕ್ಷತ್ರಿಯ ರಾಜನ ಬಳಿಗೆ ವಿನಯದಿಂದ ಬಳಿಸಾರಿದ್ದರು. ಹೀಗಾಗಿ ವಿದ್ಯೆಯನ್ನು ಪ್ರದಾನ ಮಾಡುವಾಗ ಕೈಗೊಳ್ಳಬೇಕಾದ ಉಪನಯನ ಸಂಸ್ಕಾರವನ್ನು ಮಾಡದೆಯೇ ಅವನು ವಿದ್ಯೆಯನ್ನು ಅವರಿಗೆ ಹೇಳಿಕೊಟ್ಟನು.

ಈ ವಿದ್ಯೆಯ ಸಾರಾಂಶವು ಹೀಗಿದೆ: ''ಸೂರ್ಯನೇ ವೈಶ್ವಾನರ ಆತ್ಮನ ಕಣ್ಣು. ವಾಯುವು ವೈಶ್ವಾನರನ ಪ್ರಾಣ. ಆಕಾಶವು ವೈಶ್ವಾನರನ ನಡುಮೈ. ನೀರು ಕೂಡ ವೈಶ್ವಾನರನ ಒಂದು ಅಂಗ. ಪೃಥಿವಿಯು ವೈಶ್ವಾನರನ ಪಾದಗಳು. **ವಿಶ್ವಾನ್** — ಎಂದರೆ, ಎಲ್ಲಾ ನರರನ್ನೂ ಪುಣ್ಯಪಾಪರೂಪದ ಗತಿಗೆ ಒಯ್ಯುತ್ತಾನೆ – ಆದ್ದರಿಂದ ಸರ್ವಾತ್ಮನಾದ ಈಶ್ವರನು 'ವೈಶ್ವಾನರ' ಎಂದು ಕರೆಸಿಕೊಳ್ಳುತ್ತಾನೆ. ಅಥವಾ ವಿಶ್ವ ಎಂದರೆ ಎಲ್ಲಾ ಜೀವಿಗಳ ಸಮಷ್ಟಿರೂಪನಾದ ಈಶ್ವರನೇ ವೈಶ್ವಾನರನು. ಇವನು ಸರ್ವಾತ್ಮನು. ಇಂಥ ಉಪಾಸನೆ ಮಾಡುವವನು ತಾನೂ ಸರ್ವಾತ್ಮನಾಗುತ್ತಾನೆ. ಅವನು ಎಲ್ಲರಲ್ಲಿಯೂ ಆಹಾರವನ್ನು ಉಣ್ಣುತ್ತಾನೆ. ಎಲ್ಲ ದೇಹಗಳಲ್ಲಿಯೂ ಅನುಭವವನ್ನು ಪಡೆದುಕೊಳ್ಳುತ್ತಾನೆ. ತನ್ನ ಶರೀರದಲ್ಲಿ ಮಾತ್ರವೇ ಅಭಿಮಾನವನ್ನು ಇಟ್ಟುಕೊಳ್ಳುವುದಿಲ್ಲ. ಅವನು ಎಲ್ಲ ದೇಹಗಳಲ್ಲಿಯೂ ಅಭಿಮಾನವನ್ನು ಇಟ್ಟುಕೊಳ್ಳುತ್ತಾನೆ. ಅವನು ಎಲ್ಲವೂ ಆಗಿರುತ್ತಾನೆ.''